# ಅಧ್ಯಾಯ – ೧೧
# ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

ಕ್ರಿ.ಶ. ೧೫೦೦ ರವರೆಗೆ ಆಯುರ್ವೇದ ಪದ್ಧತಿಯ ಚಿಕಿತ್ಸಾ ಸೌಲಭ್ಯಗಳು ಮೈಸೂರು ಜಿಲ್ಲೆಯಲ್ಲಿ ತುಂಬ ಜನಪ್ರಿಯವಾಗಿತ್ತು. ಇದರ ಜೊತೆಗೆ ಯುನಾನಿಪದ್ಧತಿಯೂ ಜಾರಿಯಲ್ಲಿತ್ತು. ಆದರೆ ಅದು ಗ್ರಾಮಾಂತರ ಪ್ರದೇಶದಲ್ಲಿ ಜನರಿಗೆ ತಲುಪದೆ ವಿಫಲವಾಯಿತು. ಆಯುರ್ವೇದ ಪಂಡಿತರು ನೀಡುತ್ತಿದ್ದ ಕುಪ್ಪಿ ಮಾತ್ರೆಯು ಸರ್ವರೋಗ ನಿವಾರಣೆಗೆ ಸಂಜೀವಿನಿ ಎಂಬಂತೆ ಪ್ರಸಿದ್ಧವಾಗಿತ್ತು. ೧೮೩೧–೩೨ರಲ್ಲಿ ಅಲೋಪತಿ ಪದ್ಧತಿಯ ಆಸ್ಪತ್ರೆ ಮೈಸೂರು ಅರಮನೆಯಲ್ಲಿ ಪ್ರಾರಂಭವಾಯಿತು. ೧೮೭೧ರಲ್ಲಿ ಭಾರತ ಸರ್ಕಾರವು ವೈದ್ಯಕೀಯ ಇಲಾಖೆಯನ್ನು ಸ್ಥಾಪಿಸಲು ಅನುಮೋದನೆ ನೀಡಿತು. ಇದರ ಪರಿಣಾಮವಾಗಿ ೧೮೭೬ರಲ್ಲಿ ಕೃಷ್ಣರಾಜೇಂದ್ರ ಆಸ್ಪತ್ರೆ, ೧೮೮೧ರಲ್ಲಿ ಚೆಲುವಾಂಬ ಆಸ್ಪತ್ರೆ, ೧೯೨೧ರಲ್ಲಿ ಪ್ರಿನ್ಸೆಸ್ ಕೃಷ್ಣರಾಜಮ್ಮಣಿ ಸ್ಯಾನಿಟೋರಿಯಂ ಆಸ್ಪತ್ರೆಗಳು ಮೈಸೂರು ನಗರದಲ್ಲಿ ಸ್ಥಾಪನೆಗೊಂಡವು.

೧೯೬೧ರ ವೇಳೆಗೆ ಜಿಲ್ಲೆಯಲ್ಲಿ ಎಲ್ಲಾ ವೈದ್ಯಪದ್ಧತಿಗಳನ್ನು ಒಳಗೊಂಡಂತೆ ಆಸ್ಪತ್ರೆಗಳು ಸ್ಥಾಪನೆಯಾದವು. ೧೯೬೫ರಲ್ಲಿ ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆಗಳು ಒಂದಾದವು. ಸಾಂಕ್ರಾಮಿಕರೋಗಗಳಾದ ಪ್ಲೇಗು, ಮಲೇರಿಯಾ, ಹೆಚ್.ಡಿ. ಕೋಟೆ ತಾಲೂಕಿನಲ್ಲಿ ೧೯೫೪ರಲ್ಲಿಯೇ ಕಾಣಿಸಿಕೊಂಡವು. ಮಲೇರಿಯಾ ನಿಯಂತ್ರಣ ಕಾರ್ಯಕ್ರಮವು ೧೯೫೩ರಲ್ಲಿ ಪ್ರಾರಂಭಗೊಂಡು ಎಲ್ಲಾ ಹಳ್ಳಿಗಳಿಗೂ ಡಿ.ಡಿ.ಟಿ. ಯನ್ನು ಸಂಪಡಿಸಲಾಯಿತು. ಇದರಿಂದ ೧೮೯೮ರಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡ ಪ್ಲೇಗ್ ರೋಗ ೧೯೫೪ರ ವೇಳೆಗೆ ಸಂಪೂರ್ಣವಾಗಿ ನಿರ್ಮೂಲವಾಯಿತು. ಮಲೇರಿಯಾವು ಅರಣ್ಯ ಪ್ರದೇಶಗಳಲ್ಲಿ ಸಾಮಾನ್ಯ ರೋಗವಾಗಿ ಪರಿಣಮಿಸಿತ್ತು. ಈ ಕಾರಣದಿಂದಾಗಿ ಪ್ರಾರಂಭದಲ್ಲಿ ಅರಣ್ಯ ಪ್ರದೇಶದಲ್ಲಿ ಜನಸಂಖ್ಯೆ ಕಡಿಮೆಯಾಗಲು ಕಾರಣವಾಯಿತು. ಉಳಿದ ತಾಲೂಕುಗಳಂತೆ ಹೆಗ್ಗಡದೇವನಕೋಟೆ ತಾಲೂಕಿನಲ್ಲಿಯೂ ಮಲೇರಿಯಾದಿಂದ ಅನೇಕರು ಸಾವನ್ನಪ್ಪಿದರು. ಸ್ವಾತಂತ್ರ್ಯಾನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸಿದುವು. ತತ್ಪರಿಣಾಮವಾಗಿ ತಾಲೂಕು ಮಟ್ಟದಲ್ಲಿಯೂ ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು ಸಾಮಾನ್ಯರಿಗೂ ತಲುಪುವಂತೆ ಆಯಿತು.

**ಜನನ-ಮರಣ :** ೧೯೯೩-೯೪ರ ಸಾಲಿನಲ್ಲಿ ३೧೦೮ (೧೮೫೦ ಪುರುಷ ಹಾಗೂ ೧೩೦೮ ಮಹಿಳೆ) ಮಂದಿ ಜನಿಸಿದ್ದು, ೧೦೭೯ (೬೩೦ ಗಂಡು ಹಾಗೂ ೪೪೯ ಹೆಣ್ಣು) ಮರಣ ಹೊಂದಿದ್ದರು. ಅದೇ ೨೦೦೮-೦೯ರ ಸಾಲಿನಲ್ಲಿ ೧೮೪೫ ಮಂದಿ ಜನಿಸಿದ್ದು, ೧೩೧ ಜನ ಮರಣ ಹೊಂದಿದ್ದರು.

**ಪ್ರಮುಖ ರೋಗಗಳು**

**ಪ್ಲೇಗು :** ೧೮೯೮ರಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡ ಈ ರೋಗದಿಂದ ಸಾಕಷ್ಟು ಜನ ತಾಲೂಕಿನಲ್ಲಿ ಗತಿಸಿದರು. ಆ ಪ್ರಕಾರ ಪ್ರತೀವರ್ಷ ಮಳೆಗಾಲದಲ್ಲಿ ಪ್ಲೇಗಿಗೆ ಒಳಗಾದ ಗ್ರಾಮಗಳಲ್ಲಿ ಡಿಡಿಟಿ ಮತ್ತು ಮೆಲಾಥಿಯಾನ್ ಕ್ರಿಮಿನಾಶಕಗಳನ್ನು ಸಿಂಪಡಿಸುವುದರೊಂದಿಗೆ ನಿಯಂತ್ರಿಸಲು ಯತ್ನಿಸುವುದರ ಜೊತೆಗೆ ಅಂತಹ ಗ್ರಾಮದವರನ್ನು ಊರಾಚೆಗೆ ತಾತ್ಕಾಲಿಕವಾಗಿ ಸ್ಥಳಾಂತರಿಸಿ ಗುಡಿಸಲುಗಳಲ್ಲಿ ವಾಸಿಸಲು ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೆ ೧೯೫೩ರಲ್ಲಿ ಮಲೇರಿಯಾ ನಿಯಂತ್ರಣ ಕಾರ್ಯಕ್ರಮವನ್ನು ಜಾರಿಗೆ ತರುವ ಮೂಲಕ ಪ್ರತೀ ಗ್ರಾಮದಲ್ಲೂ ಡಿಡಿಟಿ ಸಿಂಪಡಣೆ ಹಾಗೂ ಸಾರ್ವತ್ರಿಕವಾಗಿ ಪ್ಲೇಗು ನಿರೋಧಕ ಚುಚ್ಚುಮದ್ದು ನೀಡುವ ಮೂಲಕ ೧೯೫೪ರಿಂದ ಪ್ಲೇಗ್ ಭೀತಿ ದೂರವಾಯಿತು.

**ಮಲೇರಿಯಾ :** ಮಲೇರಿಯಾ ರೋಗವು ಸಾಮಾನ್ಯವಾಗಿ ಮಲೆನಾಡು ಪ್ರದೇಶದಲ್ಲಿ ಕಂಡು ಬರುತ್ತದೆ. ಅನಾಫೆಲಿಸ್ ಎಂಬ ಹೆಣ್ಣು ಸೊಳ್ಳೆಯು ರೋಗವಾಹಕವಾಗಿದ್ದು, ಡಿಡಿಟಿ, ಮೆಲಾಥಿಯಾನ್‌ಗಳ ಜೊತೆಗೆ ಪೈರಿಥ್ರಮ್ ಹಾಗೂ ಚಲುವೆ ಪುಡಿಯನ್ನು ಇತ್ತೀಚೆಗೆ ಬಳಸಲಾಗುತ್ತಿದೆ. ರೋಗಪೀಡಿತರಿಗೆ ೪ ಎಕ್ಯೂ ಕ್ವಿನೈನ್ಸ್ ನೀಡಿ ರೋಗ ಉಪಶಮನ ಮಾಡಲಾಗುತ್ತದೆ. ಈ ಸಂಬಂಧ ಮಲೇರಿಯಾ ರೋಗ ನಿರ್ಮೂಲನಾ ಕಾರ್ಯಕ್ರಮವನ್ನು ೧೯೫೩ರಿಂದೀಚೆಗೆ ರಾಷ್ಟ್ರವ್ಯಾಪಿ ಹಮ್ಮಿಕೊಳ್ಳಲಾಯಿತು. ಈ ಸಂಬಂಧ ರಕ್ತಪರೀಕ್ಷೆಯ ಮೂಲಕ ರೋಗಿಗಳನ್ನು ಪತ್ತೆ ಹಚ್ಚಿ ಶುಶ್ರೂಷೆ ನೀಡುವ ಕಾರ್ಯಕ್ರಮವನ್ನು ಆರೋಗ್ಯ ಇಲಾಖೆಯು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ.

**ಕಾಲರಾ :** ಬಹುಹಿಂದಿನಿಂದಲೂ ಭಾರತೀಯರನ್ನು ಕಾಡುತ್ತಿರುವ ರೋಗಗಳಲ್ಲಿ ಒಂದಾದ ಇದು ೧೮೬೮ರಲ್ಲಿ ಕಾಣಿಸಿಕೊಂಡುದ್ದಕ್ಕೆ ದಾಖಲೆಗಳಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಇದು ಇಳಿಮುಖವಾಗುತ್ತಾ ಬಂದಿದೆ. ಸಾರ್ವತ್ರಿಕವಾಗಿ ಕಾಲರಾ ನಿರೋಧಕ ಚುಚ್ಚುಮದ್ದು ನೀಡುವ ಮೂಲಕ ಇದನ್ನು ನಿಯಂತ್ರಿಸಲಾಗಿದೆ.

**ಕುಷ್ಠರೋಗ :** ಹಿಂದೆ ಇದೂ ಕೂಡ ಒಂದು ಪ್ರಮುಖ ರೋಗವಾಗಿದ್ದು, ರಾಷ್ಟ್ರೀಯ ಕುಷ್ಟರೋಗ ನಿರ್ಮೂಲನಾ ಕಾರ್ಯಕ್ರಮವನ್ನು ೧೯೫೯ರಲ್ಲಿ ಆರಂಭಿಸಲಾಯಿತು. ಈ ಸಂಬಂಧ ಕಾಲಕಾಲಕ್ಕೆ ಸಮೀಕ್ಷೆಯನ್ನು ನಡೆಸಿ, ರೋಗಿಗಳನ್ನು ಗುರುತಿಸಿ, ಸುಶ್ರೂಷೆಯನ್ನು ನೀಡಲಾಗುತ್ತಿದೆ.

**ಕ್ಷಯರೋಗ :** ಇದು ಇನ್ನೊಂದು ಪ್ರಮುಖ ರೋಗವಾಗಿದ್ದು, ಅದನ್ನು ನಿಯಂತ್ರಿಸಲು ೧೯೫೨ರಿಂದ ಬಿ.ಸಿ.ಜಿ. ಚುಚ್ಚುಮದ್ದು ನೀಡುವ ಪ್ರಕ್ರಿಯೆಯನ್ನು ಆರಂಭಿಸಲಾಯಿತು. ಸ್ಪುಟಮ್ ತಪಾಸಣಾ ಕಾರ್ಯವನ್ನು ೧೯೬೫–೬೭ರ ಸಾಲಿನಲ್ಲಿ ಈ ತಾಲೂಕು ಸೇರಿದಂತೆ ಜಿಲ್ಲೆಯಾದ್ಯಂತ ಕೈಗೊಳ್ಳಲಾಯಿತು. ಕ್ಷಯರೋಗಿಗಳಿಗೆಂದು ಮೈಸೂರಿನಲ್ಲಿ ಆರಂಭಗೊಂಡಿದ್ದ ಕ್ಷಯರೋಗ ಚಿಕಿತ್ಸಾಲಯ (೧೯೨೧) ವನ್ನು ೧೯೬೨ರಲ್ಲಿ ಜಿಲ್ಲಾ ಕ್ಷಯರೋಗ ಕೇಂದ್ರವನ್ನಾಗಿ ಪರಿವರ್ತಿಸಿ ಮೇಲ್ದರ್ಜೆಗೇರಿಸಲಾಗಿದ್ದು, ತಾಲೂಕಿನ ಕ್ಷಯರೋಗಿಗಳು ಒಳರೋಗಿಗಳಾಗಿ ಶುಶ್ರೂಷೆ ಪಡೆಯಲು ಮೈಸೂರಿಗೇ ಹೋಗುತ್ತಾರೆ.

**ಸಿಡುಬು :** ಬಹು ಹಿಂದೆ ಸಿಡುಬು ಕೂಡ ಒಂದು ಪ್ರಮುಖ ಸಾಂಕ್ರಾಮಿಕ ರೋಗವಾಗಿದ್ದು, ನಿವಾರಣೆಗೆ ಚುಚ್ಚುಮದ್ದನ್ನು ನೀಡಲಾಗುತ್ತಿತ್ತು. ಸಿಡುಬಿಗೆ ಚುಚ್ಚುಮದ್ದು ನೀಡುವ ಪದ್ಧತಿಯನ್ನು ೧೮೦೬ರಷ್ಟು ಹಿಂದೆಯೇ ಜರ್ಮನಿಯ ಪಾದ್ರಿ ಅಬ್ಬೆದುಬೆ ಮೈಸೂರು ಸಂಸ್ಥಾನದಲ್ಲಿ ಪರಿಚಯಿಸಿದ ಅಂಶ ಉಲ್ಲೇಖಾರ್ಹವೇ ಸರಿ. ೧೯೫೯–೬೦ರ ಸಾಲಿನಲ್ಲಿ ಬಹು ಉಗ್ರವಾಗಿ ಕಂಡಿದ್ದ ಈ ರೋಗದ ಬಿಸಿ ತಾಲೂಕಿನ ಸುಮಾರು ಶೇ. ೬೦ ಗ್ರಾಮಗಳಿಗೆ ತಾಗಿತ್ತು. ಈ ಸಂಬಂಧ ೧೯೬೧ರಲ್ಲಿ ರಾಷ್ಟ್ರವ್ಯಾಪಿ ಆರಂಭಿಸಲಾದ ಸಿಡುಬು ನಿರ್ಮೂಲನಾ ಕಾರ್ಯಕ್ರಮದಂತೆ ಒಂದು ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ದೇವಿ ಹಾಕುವುದರ ಜೊತೆಗೆ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಮರುದೇವಿ ಹಾಕುವ ತೀವ್ರ ಲಸಿಕೆ ಕಾರ್ಯಕ್ರಮವನ್ನು ಅನುಸರಿಸಲಾಯಿತು. ತತ್ಪರಿಣಾಮವಾಗಿ ೧೯೬೦–೭೦ರ ದಶಕದಲ್ಲಿ ನಿಯಂತ್ರಣಕ್ಕೆ ಬಂದ ಇದು ೧೯೭೮ರ ನಂತರ ಸಂಪೂರ್ಣ ನಿರ್ಮೂಲಗೊಂಡಿದೆ.

ಈ ರೋಗಗಳ ಜೊತೆಗೆ ಇತ್ತೀಚಿನ ದಿನಗಳಲ್ಲಿ ಕೈಗಾರೀಕರಣ, ನಗರೀಕರಣ, ವಲಸೆ ಮುಂತಾದವು ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ನೂತನ ರೋಗಗಳಿಗೆ ಎಡೆ ಮಾಡಿಕೊಟ್ಟಿವೆ. ಅರ್ಬುದ, ಹೃದಯರೋಗ, ಉಸಿರಾಟ ತೊಂದರೆ, ಅಂಧತ್ವ, ಪೋಲಿಯೋ, ಮೆದುಳು ಜ್ವರ, ಡೆಂಗೀಜ್ವರ, ಏಡ್ಸ್, ಚಿಕೂನ್‌ಗುನ್ಯಾ, ಮುಂತಾದ ರೋಗಗಳು ಇಂದು ಜನಸಾಮಾನ್ಯರನ್ನು ಕಾಡುತ್ತಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

**ಡೆಂಗೀಜ್ವರ :** ಈಡೀಸ್ ಈಜಪ್ಟೈ ಎಂಬ ಜಾತಿಯ ಸೊಳ್ಳೆಗಳ ಮೂಲಕ ಹರಡುವ ಡೆಂಗೀ ಎಂಬ ವೈರಸ್‌ನಿಂದ ಬರುವ ಇದು ಮಕ್ಕಳಲ್ಲಿ ತೀವ್ರಗತಿಯಲ್ಲಿ ಹರಡುತ್ತದೆ. ಇದರಲ್ಲಿ ೧.ಸಾಮಾನ್ಯ ಡೆಂಗೀ, ೨. ಡೆಂಗೀ ರಕ್ತಸ್ರಾವ ಜ್ವರ ಹಾಗೂ ೩. ಡೆಂಗೀ ಶಾಕ್ ಸಿಂಡ್ರೋಮ್ ಎಂಬ ಮೂರು ವಿಧಗಳಿದ್ದು, ವಿಪರೀತ ಜ್ವರ, ತಲೆನೋವು, ಕೀಲು ಮಾಂಸಖಂಡ ನೋವು ಹಾಗೂ ರಕ್ತಸ್ರಾವ ಈ ರೋಗದ ಲಕ್ಷಣಗಳಾಗಿವೆ. ಅದರಲ್ಲೂ ಕೆಲವೊಮ್ಮೆ ತೀವ್ರ ರಕ್ತ ಒತ್ತಡ ಕುಸಿತದಿಂದಾಗಿ ಡೆಂಗೀ ರಕ್ತಸ್ರಾವ ಜ್ವರವು, ರೋಗಿಗೆ ಪ್ರಾಣಾಂತಕವಾಗಿ ಪರಿಣಮಿಸಬಹುದು.

**ಮೆದುಳು ಜ್ವರ :** ಪ್ರಾಣಿಗಳಲ್ಲಿ (ವಿಶೇಷವಾಗಿ ಹಂದಿಗಳಲ್ಲಿ) ಸೇರಿಕೊಂಡಿರುವ ವೈರಾಣುಗಳು ಈ ರೋಗವನ್ನು ಹರಡುತ್ತವೆ. ಇದರ ನಿಯಂತ್ರಣಕ್ಕೆ ಹಂದಿಗಳನ್ನು ಜನರ ವಾಸಸ್ಥಳದಿಂದ ಬೇರ್ಪಡಿಸುವಿಕೆ, ಕೀಟನಾಶಕಗಳ ಸಿಂಪಡಣೆ, ಶಂಕಿತ ರೋಗಿಗಳಿಗೆ ಸೂಕ್ತ ಚಿಕಿತ್ಸೆ ಮುಂತಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

**ಏಡ್ಸ್ :** ಎಚ್.ಐ.ವಿ. ಎಂಬ ವೈರಾಣುವಿನ ಸೋಂಕಿನಿಂದ ಏಡ್ಸ್ ಉಂಟಾಗುತ್ತಿದ್ದು, ಇದನ್ನು ಮನುಷ್ಯನ ಶಕ್ತಿಗುಂದುವಿಕೆಯ ಅರ್ಜಿತ ಲಕ್ಷಣ ಕೂಟವೆನ್ನಲೂಬಹುದು. ರೋಗಪೀಡಿತ ವ್ಯಕ್ತಿಯು ರೋಗ ನಿರೋಧಕ ಶಕ್ತಿಯನ್ನು ಸಂಪೂರ್ಣ ಕಳೆದುಕೊಳ್ಳುತ್ತಾನೆ. ಎಲಿಸಾ ಎಂಬ ಪರೀಕ್ಷಾ ವಿಧಾನದಿಂದ ಎಚ್.ಐ.ವಿ. ಸೋಂಕನ್ನು ಪತ್ತೆ ಮಾಡಬಹುದು. ಈ ಬಗ್ಗೆ ೧೯೮೭ರಿಂದಲೇ ಸರ್ಕಾರ ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕ ಅರಿವು ಮೂಡಿಸಲು ಮುಂದಾಯಿತು. ಏಡ್ಸ್ ರೋಗಿಗಳ ಜೊತೆಗಿನ ಲೈಂಗಿಕ–ಸಂಪರ್ಕ, ರಕ್ತದಾನ ಮುಂತಾದ ಸಂದರ್ಭದಲ್ಲಿ ಮಾತ್ರ ಇದು ಒಬ್ಬರಿಂದೊಬ್ಬರಿಗೆ ಹರಡುತ್ತದೆ. ಏತನ್ಮಧ್ಯೆ ಏಡ್ಸ್ ಬಗ್ಗೆ ಅರಿವು ನೀಡಿ ಆತ್ಮಸ್ಥೈರ್ಯ ಮೂಡಿಸುವ ಕಾರ್ಯಕ್ರಮಗಳೂ ನಡೆಯುತ್ತಿದೆ.

**ಚಿಕೂನ್‌ಗುನ್ಯಾ :** ಇತ್ತೀಚಿನ ದಿನಗಳಲ್ಲಿ (೨೦೦೬) ಜನರನ್ನು ಅತಿಹೆಚ್ಚು ಕಾಡಿದ ಈ ರೋಗವೂ ಕೂಡ ಆಲ್ಫಾವೈರಸ್‌ನಿಂದ ಬರುತ್ತಿದ್ದು, ಡೆಂಗೀ ಜ್ವರವನ್ನು ಹರಡುವ ಹೆಣ್ಣು ಎಡಿಸ್ ಎಜಿಪ್ಟಿ ಸೊಳ್ಳೆಗಳಿಂದಲೇ ಈ ಜ್ವರವೂ ಹರಡುತ್ತದೆ. ಈ ಸೊಳ್ಳೆಗಳು ಹೆಚ್ಚಾಗಿ ಹಗಲಲ್ಲೇ ಕಚ್ಚುತ್ತಿದ್ದು, ಜ್ವರ, ಕೀಲುನೋವು, ಕಿರುತಲೆನೋವು, ಅಶಕ್ತತೆ, ಹಸಿವಾಗದಿರುವಿಕೆ ಮತ್ತು ಮೈಮೇಲೆಗಂದೆ ಏಳುವುದು ಈ ರೋಗದ ಪ್ರಮುಖ ಗುಣಲಕ್ಷಣವಾಗಿದೆ. ಆದ್ದರಿಂದ ಈ ಸೊಳ್ಳೆಗಳು ವೃದ್ಧಿಗೊಳ್ಳದಂತೆ ನೋಡಿಕೊಳ್ಳಬೇಕಾಗಿದ್ದು, ಇವು ಮನೆಯಲ್ಲೇ ಇಟ್ಟ ಮೊಟ್ಟೆಗಳು ಮರಿಯಾಗಿ ವೃದ್ಧಿಸುತ್ತವೆ. ನಿರುಪಯುಕ್ತ ಪ್ಲಾಸ್ಟಿಕ್ ಡಬ್ಬ, ಖಾಲಿಡಬ್ಬ, ಹಳೇಟೈರು, ಮಣ್ಣಿನ ಹೂಕುಂಡ, ನೀರಿನ ತೊಟ್ಟಿ, ತೆಂಗಿನ ಚಿಪ್ಪು, ಮುಂತಾದೆಡೆಗಳು ಇವುಗಳ ಆಶ್ರಯತಾಣಗಳು. ಈ ಸೊಳ್ಳೆಯ ಮೊಟ್ಟೆಗಳು ನೀರಿನಲ್ಲಿ ಬದುಕುಳಿಯಬಲ್ಲವಾಗಿದ್ದು, ದೀರ್ಘಾವಧಿಯ ನಂತರವೂ ಮರಿಯಾಗಬಲ್ಲವು. ಆ ಕಾರಣ ಇವುಗಳನ್ನು ನಿಯಂತ್ರಿಸಲು ಸ್ವಚ್ಛ ಪರಿಸರವನ್ನು ಕಾಯ್ದಿಟ್ಟುಕೊಳ್ಳುವುದೇ ಆಗಿದೆ. ಈ ಸಂಬಂಧ ಸಾರ್ವಜನಿಕ ಅರಿವನ್ನು ಮೂಡಿಸಲು ಆರೋಗ್ಯ ಇಲಾಖೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು.

೨೦೦೯ರ ಮಾರ್ಚ್ ಅಂತ್ಯಕ್ಕೆ ಹೆಗ್ಗಡದೇವನಕೋಟೆಯಲ್ಲಿ ೫೦ ಹಾಸಿಗೆಯುಳ್ಳ ಅಲೋಪತಿ ಸಾರ್ವಜನಿಕ ಆಸ್ಪತ್ರೆ ಇದೆ. ಇದಲ್ಲದೆ ಭಾರತೀಯ ವೈದ್ಯ ಪದ್ಧತಿಯ ಆಸ್ಪತ್ರೆ ಒಂದು, ಖಾಸಗಿ ಆಸ್ಪತ್ರೆಗಳು ನಾಲ್ಕು ಇದ್ದು ೮೫ ಹಾಸಿಗೆಗಳ ಸೌಲಭ್ಯವಿದೆ. ೭೮ ಹಾಸಿಗೆಗಳ ೧೪ ಪ್ರಾಥಮಿಕ ಆರೋಗ್ಯ ಕೇಂದ್ರಗಳು ತಾಲೂಕಿನಲ್ಲಿವೆ. ನಾಲ್ಕು ಪ್ರಾಥಮಿಕ ಆರೋಗ್ಯ ಘಟಕಗಳು, ೨೦೦ ಪಲ್ಸ್‌ಪೋಲಿಯೋ ಲಸಿಕಾಕೇಂದ್ರಗಳು, ೩ ಕುಟುಂಬಕಲ್ಯಾಣಕೇಂದ್ರಗಳು ಹಾಗೂ ೭೮ ಉಪಕೇಂದ್ರಗಳು ಇದ್ದು ತಾಲೂಕಿನ

ಜನತೆಗೆ ಆರೋಗ್ಯ ಸೇವೆಯನ್ನು ನೀಡಲಾಗುತ್ತಿವೆ. ಜೊತೆಗೆ ೨ ಸಂಚಾರಿ ಗಿರಿಜನ ಆರೋಗ್ಯ ಘಟಕಗಳಿದ್ದವು.

೨೦೦೬ನೇ ಸಾಲಿನಲ್ಲಿ ಕುಟುಂಬ ಕಲ್ಯಾಣಯೋಜನೆಯಡಿಯಲ್ಲಿ ೨೭೭೦ ಮಹಿಳೆಯರಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗಿದೆ. ತಾಲೂಕಿನಲ್ಲಿ ಒಂದು ರಕ್ತ ನಿಧಿ ಕೇಂದ್ರ ಹಾಗೂ ೨೧ ಔಷಧಿ ಅಂಗಡಿಗಳಿವೆ. ಮಕ್ಕಳಿಗಾಗಿ ೫೩೦೧ ಮಕ್ಕಳಿಗೆ ಡಿ.ಪಿ.ಟಿ., ೪೩೦೨ ಮಕ್ಕಳಿಗೆ ಪೋಲಿಯೋ, ೫೨೦೧ ಮಕ್ಕಳಿಗೆ ಬಿ.ಸಿ.ಜಿ., ೫೩೧೨ ಮಕ್ಕಳಿಗೆ ಧಡಾರ, ೫೮೬೪ ಮಕ್ಕಳಿಗೆ ಟಿ.ಟಿ. ನಿರೋಧಕ ಚುಚ್ಚು ಮದ್ದುಗಳನ್ನು ಹಾಕಲಾಗಿತ್ತು.

ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನ ಕಾರ್ಯಕ್ರಮದಡಿಯಲ್ಲಿ ತಾಲೂಕಿನಲ್ಲಿ ಪತ್ತೆಯಾಗಿರುವ ೭ ಹೊಸ ರೋಗಿಗಳಿಗೆ ಚಿಕಿತ್ಸೆ ನೀಡಿ ಸಂಪೂರ್ಣವಾಗಿ ಗುಣಪಡಿಸಲಾಗಿದೆ. ತಾಲೂಕಿನಲ್ಲಿ ಪ್ರತಿ ೧೦೦೦೦ ಜನಸಂಖ್ಯೆಗೆ ೦.೨೩ ಕುಷ್ಠ ರೋಗಿಗಳಿದ್ದಾರೆ. ಅಲ್ಲದೆ ಚಿಕಿತ್ಸೆಯಲ್ಲಿರುವ ೬ ರೋಗಿಗಳಿದ್ದರು.

ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ತಾಲೂಕಿನಲ್ಲಿ ೧೯೫ ಜನ ಕ್ಷಯ ರೋಗಿಗಳನ್ನು ಪತ್ತೆ ಹಚ್ಚಲಾಗಿದೆ. ಅವರಿಗೆಲ್ಲಾ ಚಿಕಿತ್ಸೆ ನೀಡಿದ್ದು, ३೦ ಜನರು ಸಂಪೂರ್ಣವಾಗಿ ಗುಣಮುಖರಾಗಿದ್ದರು.

ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ತಾಲೂಕಿನಲ್ಲಿ ೧೧೨೭ ಫಲಾನುಭವಿಗಳಿಗೆ ನೇತ್ರ ಚಿಕಿತ್ಸೆ ನೀಡಲಾಗಿದೆ. ೧೯೩೬೨ ಶಾಲಾ ಮಕ್ಕಳನ್ನು ಪರೀಕ್ಷಿಸಲಾಗಿದೆ, ೧೧೧ ಜನರಿಗೆ ಉಚಿತ ಕನ್ನಡಕ ವಿತರಿಸಲಾಗಿತ್ತು.

**ಕುಟುಂಬ ಕಲ್ಯಾಣ ಯೋಜನೆಗಳು ಹಾಗೂ ಅನುಷ್ಠಾನ :** ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ೨೦೦೫-೦೬ನೇ ಸಾಲಿನ ಕುಟುಂಬ ಕಲ್ಯಾಣ ಮತ್ತು ಲಸಿಕಾ ಕಾರ್ಯಕ್ರಮಗಳ ಅನುಷ್ಠಾನದ ವಿವರಗಳು ಈ ಕೆಳಗಿನಂತಿರುತ್ತವೆ. ವ್ಯಾಪ್ತಿಗೆ ಬರುವ ೩೫೮೦೬ ಜನಸಂಖ್ಯೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟವರು ೪೧ ಮಂದಿ, ೨೬೦ ಮಂದಿಗೆ ವಂಕಿ ಅಳವಡಿಕೆ, ೧೭೫ ಮಂದಿಗೆ ನುಂಗುವ ಮಾತ್ರೆ ವಿತರಣೆ. ಲಸಿಕಾ ಕಾರ್ಯಕ್ರಮದಡಿಯಲ್ಲಿ ೯೦೮ ಗರ್ಭಿಣಿ ಸ್ತ್ರೀಯರಿಗೆ ಟಿ.ಟಿ. ಚುಚ್ಚು ಮದ್ದು, ೭೩೨ ಮಂದಿಗೆ ಬಿ.ಸಿ.ಜಿ., ಡಿ.ಪಿ.ಟಿ. ಪೋಲಿಯೋ, ದಢಾರ, ಬಲವರ್ಧಕ, ೭೮೪ ಮಂದಿಗೆ ಡಿ ಅಂಡ್ ಟಿ, ೮೫೩ ಮಂದಿಗೆ ಟಿ.ಟಿ.ಯ ೧೦ ವರ್ಷ, ೮೪೩ ಮಂದಿಗೆ ಟಿ.ಟಿ. ೧೬ ವರ್ಷ.

ನಿರೋಧ್ ಉಪಯೋಗಿಸುವವರು ಸಂಚಿತ ಸಾಧನ ೨೧೧೧ ಮಂದಿ ನುಂಗುವ ಗುಳಿಗೆಗಳ ವಾರ್ಷಿಕ ಗುರಿ ೧೩೪೧, ತಿಂಗಳ ಸಾಧನೆ ೧೩೧೦, ಸಂಚಿತಸಾಧನೆ ೧೨೦೨, ಶೇಕಡ ೮೯.೬, ವಂಕಿ ಅಳವಡಿಕೆ ಕಾರ್ಯಕ್ರಮದಲ್ಲಿ ವಾರ್ಷಿಕ ಗುರಿ ೧೭೨೦,

ತಿಂಗಳ ಸಾಧನೆ ೧೪೬, ಸಂಚಿತ ಸಾಧನೆ ೧೪೦೨, ಶೇ. ೮೧.೫ ಶಸ್ತ್ರ ಚಿಕಿತ್ಸೆಯಲ್ಲಿ ವಾರ್ಷಿಕ ಗುರಿ ೨೮೬೦, ತಿಂಗಳಿನಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವವರು ಶೇ. ೮೧.

ಲಸಿಕಾ ಕಾರ್ಯಕ್ರಮದಡಿಯಲ್ಲಿ ಗರ್ಭಿಣಿ ಸ್ತ್ರೀಯರಿಗೆ ಟಿ.ಟಿ. ಚುಚ್ಚು ಮದ್ದು ವಾರ್ಷಿಕ ೬೦೫೪ ಗುರಿಯನ್ನು ಇಟ್ಟುಕೊಳ್ಳಲಾಗಿದ್ದು, ತಿಂಗಳ ಸಾಧನೆ ೪೭೭ ಮಂದಿ, ಸಂಚಿತ ಸಾಧನೆ ೪೮೧೩ ಮಂದಿ ಆಗಿದೆ. ಇದು ಶೇಕಡವಾರು ೭೯.೫ ಆಗಿರುತ್ತದೆ. ಬಿ.ಸಿ.ಜಿ. ವಾರ್ಷಿಕ ಗುರಿ ೫೫೧೩ ಮಂದಿ, ತಿಂಗಳ ಸಾಧನೆ ೪೩೩ ಮಂದಿ, ಸಂಚಿತ ಸಾಧನೆ ೪೧೫೬ ಮಂದಿ, ಶೇಕಡಾವಾರು ೭೫.೩. ಡಿ.ಪಿ.ಟಿ. ಪೋಲಿಯೊ ವಾರ್ಷಿಕ ಗುರಿ ೫೫೧೩ ಮಂದಿ. ತಿಂಗಳ ಸಾಧನೆ ೪೫೪ ಮಂದಿ. ಸಂಚಿತಸಾಧನೆ ೪೨೪೩ ಮಂದಿ ಶೇಕಡವಾರು ೭೬.೯. ದಢಾರ ಕಾರ‍್ಯಕ್ರಮದ ವಾರ್ಷಿಕ ಗುರಿ ೫೫೧೩ ಮಂದಿ. ತಿಂಗಳ ಸಾಧನೆ ೪೪೯ ಮಂದಿ. ಸಂಚಿತ ಸಾಧನೆ ೪೧೬೫ ಮಂದಿ. ಶೇಕಡಾವಾರು ೭೫.೫ ಡಿ.ಟಿ.ಪಿ. ಪೋಲಿಯೋ ಬಲವರ್ಧಕ ವಾರ್ಷಿಕ ಗುರಿ ೫೫೩ ಮಂದಿ, ತಿಂಗಳ ಸಾಧನೆ ೪೩೦ ಮಂದಿ, ಸಂಚಿತ ಸಾಧನೆ ೪೧೪೦ ಮಂದಿ, ಶೇಕಡವಾರು ೭೪.೪ ಆಗಿರುತ್ತದೆ. ಡಿ. ಅಂಡ್ ಟಿ. ವಾರ್ಷಿಕ ಗುರಿ ೫೯೧೦ ಮಂದಿ, ತಿಂಗಳ ಸಾಧನೆ ೧೬೯ ಮಂದಿ, ಸಂಚಿತ ಸಾಧನೆ ೪೭೭೫ ಮಂದಿ ಶೇಕಡವಾರು ೮೧.೧. ಟಿ.ಟಿ. ೧೦ ವರ್ಷದ ಮಕ್ಕಳ ವಾರ್ಷಿಕ ಗುರಿ ೭೦೪೮, ತಿಂಗಳ ಸಾಧನೆ ೨೩೨, ಸಂಚಿತ ಸಾಧನೆ ೫೧೯೬, ಶೇಕಡವಾರು ೭೩.೭.

ತಾಯಿ ಮಕ್ಕಳ ಆರೋಗ್ಯ ಕಾರ‍್ಯಕ್ರಮದಡಿಯಲ್ಲಿ ಗರ್ಭಿಣಿಯರ ದಾಖಲಾತಿ ವಾರ್ಷಿಕ ಗುರಿ ೬೦೫೪, ತಿಂಗಳ ಸಾಧನೆ ೪೭೪, ಸಂಚಿತ ಸಾಧನೆ ೪೯೪೬. ಶೇಕಡವಾರು ೮೧.೬. ಗರ್ಭಿಣಿಯರನ್ನು ಬೇಗನೆ ದಾಖಲೆ ಮಾಡಲು ವಾರ್ಷಿಕ ಗುರಿ ೩೬೩೨, ತಿಂಗಳ ಸಾಧನೆ ೩೩೮, ಸಂಚಿತ ಸಾಧನೆ ೩೫೫೬, ಶೇಕಡ ವಾರು ೯೭.೯. ಗರ್ಭಿಣಿಯರ ಕನಿಷ್ಟ ೩ ಭೇಟಿ ಮಾಡಲು ವಾರ್ಷಿಕ ಗುರಿ ೬೦೫೪, ತಿಂಗಳ ಸಾಧನೆ ೪೭೪, ಸಂಚಿತ ಸಾಧನೆ ೪೮೭೭, ಶೇಕಡವಾರು ೮೦.೫. ತೊಡಕಿನ ಗರ್ಭಿಣಿಯರನ್ನು ಪತ್ತೆಹಚ್ಚಿ ನಿರ್ದೇಶಿಸಲು ವಾರ್ಷಿಕ ಗುರಿ ೯೩೪, ತಿಂಗಳ ಸಾಧನೆ ೨೮, ಸಂಚಿತ ಸಾಧನೆ ೪೮೯, ಶೇಕಡವಾರು ೪೩.೭.

ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಹೆರಿಗೆ ವಿವರಗಳು, ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ವಾರ್ಷಿಕ ಗುರಿ ೧೮೯೮, ತಿಂಗಳ ಸಾಧನೆ ೧೫, ಸಂಚಿತ ಸಾಧನೆ ೧೩೪೧, ಶಾಕಡವಾರು ೭೦.೬, ತರಬೇತಿ ಹೊಂದಿದ ದಾಯಿಯ ವಾರ್ಷಿಕ ಗುರಿ ೪೨೩, ತಿಂಗಳ ಸಾಧನೆ ೨೫, ಸಂಚಿತ ಸಾಧನೆ ೪೨೭, ಶೇಕಡವಾರು ೧೦೦.೯.

ಸಂಸ್ಥೆಗಳ ವಾರ್ಷಿಕ ಗುರಿ ೩೭೩೩, ತಿಂಗಳ ಸಾಧನೆ. ೩೫೩, ಸಂಚಿತ ಸಾಧನೆ ೨೧೩೮, ಶೇಕಡವಾರು ೫೭.

ಒಟ್ಟು ಹೆರಿಗೆಗಳ ವಾರ್ಷಿಕ ಗುರಿ ೬೦೫೪, ತಿಂಗಳ ಸಾಧನೆ ೩೯೩, ಸಂಚಿತ ಸಾಧನೆ ೩೮೯೬, ಶೇಕಡವಾರು ೬೮.೩.

ತಾಯಿ ಮಕ್ಕಳ ಆರೋಗ್ಯ 'ಎ' ಅನ್ನಾಂಗ ಪಾಕ ವಿತರಣೆ, ದಾಯಿ ತರಬೇತಿ, ಶಾಲಾ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಒಟ್ಟು ೩೩೯ ಶಾಲೆಗಳಿದ್ದು ೧೮೩ ಶಾಲೆಗಳಿಗೆ ಭೇಟಿ ನೀಡಲಾಗಿದೆ. ೪೫,೨೭೨ ಮಕ್ಕಳ ಗುರಿಯನ್ನು ಹೊಂದಿದ್ದು ೨೧೧೩೭ ಮಕ್ಕಲನ್ನು ಪರೀಕ್ಷಿಸಲಾಗಿದೆ. ಶೇಕಡವಾರು ೪೬.೬.

ರಾಷ್ಟ್ರೀಯ ಮಲೇರಿಯಾ ನಿಯಂತ್ರಣ ಯೋಜನೆಯಡಿಯಲ್ಲಿ ರಕ್ತಲೇಪನ ಸಂಗ್ರಹಣೆಯ ಸಕ್ರಿಯ ಗುರಿಯನ್ನು ೨೪೮೭ ಮಂದಿಗೆ ಇಟ್ಟುಕೊಂಡು ತಿಂಗಳ ಪ್ರಗತಿಯನ್ನು ೨೦೯೩ ಕ್ಕೆ ಸಾಧಿಸಿತ್ತು.

ರಕ್ತ ಲೇಪನ ಸಂಗ್ರಹಣೆಯ ಸ್ಥಿತ ಹೊರ ರೋಗಿಗಳ ಸಂಖ್ಯೆ ೧೫೩೪೧, ೨೩೦೧ ಗುರಿಯನ್ನು ಇಟ್ಟು ಕೊಂಡು ತಿಂಗಳ ಸಾಧನೆಯನ್ನು ೧೭೦೧ ಮಾಡಲಾಗಿದೆ. ಶೇಕಡವಾರು ೭೪.

ಮಲೇರಿಯಾ ರೋಗಿಯೂ ಒಬ್ಬರಿಗೆ ಪಿ.ಪಿ. ಚಿಕಿತ್ಸೆ ನೀಡಲಾಗಿದೆ. ಕಾಲರಾ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ತಾಲೂಕಿನಲ್ಲಿ ಯಾವುದೇ ರೋಗಿಗಳಿಲ್ಲ. ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯ ವಾರ್ಷಿಕ ಗುರಿ ೭೪೦, ಮಾಸಿಕ ಪ್ರಗತಿ ೪೩, ಸಂಚಿತ ಪ್ರಗತಿ ೬೩೦, ಶೇಕಡವಾರು ೮೫.೧.

ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಹೊರ ರೋಗಿಗಳ ಸಂಖ್ಯೆ ೧೧೩೩೧ ಇದ್ದು, ಕಫಲೇಪನ ಸಂಗ್ರಹಣೆಯ ವಾರ್ಷಿಕ ಗುರಿ ೧೪೬೫, ಮಾಸಿಕ ಪ್ರಗತಿ ೧೫೭, ಸಂಚಿತ ಪ್ರಗತಿ ೧೬೨೮. ಶೇಕಡವಾರು ೧೧೧.೧ ಹೊಸ ಕ್ಷಯ ರೋಗಿಗಳ ಪತ್ತೆ ವಾರ್ಷಿಕ ಗುರಿ ೧೪೭, ಮಾಸಿಕ ಪ್ರಗತಿ ೨೦, ಸಂಚಿತ ಪ್ರಗತಿ ೬೮, ಶೇಕಡವಾರು ೮೬.೯, ಸಂಪೂರ್ಣ ಚಿಕಿತ್ಸೆ ನೀಡಿದ್ದು ಮಾಸಿಕ ಪ್ರಗತಿ ೩, ಸಂಚಿತ ಪ್ರಗತಿ ೭೩.

ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಹೊಸರೋಗಿ ಪತ್ತೆಯ ಸಂಚಿತ ಸಾಧನೆ ೮, ವಾಸಿಯಾದ ಪ್ರಕರಣಗಳ ಸಂಚಿತ ಸಾಧನೆ ೮, ಹಾಲಿ ಇರುವ ರೋಗಿಗಳು ಪಿ.ಟಿ. ೨, ಎಂ.ಬಿ. ೪, ಒಟ್ಟು ೬, ಚಿಕಿತ್ಸೆ ನೀಡಿದ್ದು ಪಿ.ಟಿ. ೨, ಎಂ.ಬಿ. ೪, ಒಟ್ಟು ೬.

೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೧೦೦ ಹಾಸಿಗೆ ಸಾಮರ್ಥ್ಯದ ಒಂದು ಆಲೋಪತಿ ಆಸ್ಪತ್ರೆ, ಒಟ್ಟು ೮೫ ಹಾಸಿಗೆ ಸಾಮರ್ಥ್ಯದ ನಾಲ್ಕು ಖಾಸಗಿ ಆಸ್ಪತ್ರೆ, ೭೮ ಹಾಸಿಗೆ ಸಾಮರ್ಥ್ಯದ ೧೮ ಪ್ರಾಥಮಿಕ ಆರೋಗ್ಯ ಕೇಂದ್ರಗಳು ೨೦೦ ಪಲ್ಸ್ ಪೋಲಿಯೋ ಲಸಿಕಾ ಕೇಂದ್ರಗಳು, ಒಂದು ಸಮುದಾಯ ಆರೋಗ್ಯಕೇಂದ್ರ,

ಒಂದು ಆಲೋಪತಿ ಚಿಕಿತ್ಸಾಲಯ, ೭೮ ಕುಟುಂಬ ಕಲ್ಯಾಣ ಉಪಕೇಂದ್ರಗಳಿದ್ದು, ೨೩೯೪ (ಒಂಭತ್ತು ವ್ಯಾಸೆಕ್ಟಮಿ ಹಾಗೂ ೨೨೩೯೧ ಟ್ಯುಬೆಕ್ಟಮಿ) ಸಂತಾನಹರಣ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿತ್ತು. ಆ ಸಾಲಿನಲ್ಲಿ ತಲಾ ೪,೫೬೨ ಡಿ.ಪಿ.ಟಿ. ಹಾಗೂ ಪೋಲಿಯೋ ೪,೫೮೪ ಬಿ.ಸಿ.ಜಿ., ೪,೫೮೯ ದಢಾರ ಹಾಗೂ ೫,೧೮೧ ಟಿ.ಟಿ. ಲಸಿಕೆಗಳನ್ನು ಹಾಕಲಾಗಿತ್ತು. ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿ ಮೂರು ಹೊಸರೋಗಿಗಳನ್ನು ಪತ್ತೆಹಚ್ಚಿ ಇಬ್ಬರಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಐವರು ರೋಗಿಗಳು ಗುಣಮುಖರಾಗಿದ್ದರು. ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದಡಿ ೪೩೯ ಹೊಸರೋಗಿಗಳನ್ನು ಪತ್ತೆ ಹಚ್ಚಿ, ೧೪೫ ಮಂದಿ ಗುಣಮುಖರಾಗಿದ್ದು, ಏಳು ಮಂದಿ ಮರಣಿಸಿದ್ದರು. ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮದಡಿ ಆರು ಮಂದಿಯನ್ನು ಗುರುತಿಸಿ, ಗುಣಪಡಿಸಲಾಗಿತ್ತು. ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿ ೮೩೫ ಮಂದಿ ಫಲಾನುಭವಿಗಳಿಗೆ ಉಚಿತ ನೇತ್ರ ಚಿಕಿತ್ಸೆಯನ್ನು ಮಾಡಲಾಗಿತ್ತು. ಒಟ್ಟು ೧೦,೮೬೮ ಶಾಲಾ ಮಕ್ಕಳನ್ನು ಪರೀಕ್ಷಿಸಿ, ೧೦೧ ಮಕ್ಕಳಿಗೆ ಉಚಿತ ಕನ್ನಡಕವನ್ನು ವಿತರಿಸಲಾಗಿತ್ತು. ತಾಲೂಕು ಕೇಂದ್ರ ಹೆಗ್ಗಡದೇವನಕೋಟೆಯಲ್ಲಿ ರಕ್ತನಿಧಿ ಕೇಂದ್ರವಿದ್ದು, ೨೧ ಔಷಧಿ ಅಂಗಡಿಗಳು ತಾಲೂಕಿನ ಹೆಗ್ಗಡದೇವನಕೋಟೆ, ಹ್ಯಾಂಡ್‌ಪೋಸ್ಟ್, ಸರಗೂರು ಮುಂತಾದ ಊರುಗಳಲ್ಲಿದ್ದವು.

* * * *